ಸ್ವಸಹಾಯ ಗುಂಪುಗಳಿಗೆ ಸ್ವಾವಲಂಬಿಯಾಗಲು ಉದ್ಯೋಗಾವಕಾಶ ಕಲ್ಪಿಸುವುದು

4(19) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ಸ್ವಸಹಾಯ ಗುಂಪುಗಳ ಸಂಖ್ಯೆಯೆಷ್ಟು;

ಆ) ಇವುಗಳಿಗೆ ರಾಜ್ಯ ಸರ್ಕಾರವು ನೀಡಿರುವ ಆರ್ಥಿಕ ನೆರವಿನ ವಿವರಗಳೇನು;

ಇ) ಈ ಗುಂಪುಗಳು ಉಳಿತಾಯ ಮಾಡಿರುವ ಮೊತ್ತವೆಷ್ಟು;

ಈ) ಇವು ಸ್ವಾವಲಂಬಿಗಳಾಗಲು ಉದ್ಯೋಗಾವಕಾಶವನ್ನು ಕಲ್ಪಿಸುವ ದಿಶೆಯಲ್ಲಿ ರಾಜ್ಯ ಸರ್ಕಾರವು ಕಾರ್ಯಕ್ರಮವನ್ನೇನಾದರೂ ರೂಪಿಸಿದೆಯೇ;

ಉ) ರೂಪಿಸಿದ್ದಲ್ಲಿ, ಅದರ ವಿವರಗಳೇನು; ರೂಪಿಸದಿದ್ದಲ್ಲಿ ಕಾರಣಗಳೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ 74384 ಸ್ತ್ರೀಶಕ್ತಿ ಗುಂಪು ರಚಿಸಲಾಗಿದೆ. ಮಹಿಳಾ ನಿಗಮದವತಿಯಿಂದ ಸ್ವಶಕ್ತಿಯೋಜನೆಯಡಿ 2152 ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದೆ.

ಆ) ರಚನೆಯಾಗಿರುವ ಸ್ತ್ರೀಶಕ್ತಿ ಗುಂಪುಗಳ ಪೈಕಿ 23314 ಗುಂಪುಗಳಿಗೆ ರೂ. 1165.70 ಲಕ್ಷ ಸುತ ನಿಧಿಯನ್ನು ನೀಡಲಾಗಿದೆ. ಸ್ವಶಕ್ತಿ ಯೋಜನೆಯಡಿ ರಾಜ್ಯ ಸರ್ಕಾರದಿಂದ ಆರ್ಥಿಕ ಅನುದಾನ ನೀಡುತ್ತಿಲ್ಲ.

ಇ) ಸ್ತ್ರೀಶಕ್ತಿ ಗುಂಪುಗಳು ರೂ. 110.46 ಕೋಟಿ ಉಳಿತಾಯ ಮಾಡಿರುತ್ತವೆ.

ಈ) - ಹೌದು -

ಉ) 1. ರಚನೆಯಾಗಿರುವ ಗುಂಪುಗಳ ಪೈಕಿ 10468 ಗುಂಪುಗಳಿಗೆ ಆದಾಯೋತ್ಪನ್ನ ಚಟುವಟಿಕೆಗಳಿಗೆ ರೂ. 22.97 ಕೋಟಿ ಬ್ಯಾಂಕ್ ಸಾಲ ಸೌಲಭ್ಯವನ್ನು ಒದಗಿಸಲಾಗಿದೆ.

2. ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ನ್ಯೂ ಸ್ವರ್ಣಮಾ ಯೋಜನೆಯಡಿ 7686 ಸ್ತ್ರೀಶಕ್ತಿ ಗುಂಪಿನ ಸದಸ್ಯರಿಗೆ ರೂ. 644 ಲಕ್ಷ ಸಾಲ ಸೌಲಭ್ಯ ಕಲ್ಪಿಸಲಾಗಿದೆ.

3. 1519 ಸ್ತ್ರೀಶಕ್ತಿ ಗುಂಪುಗಳಿಗೆ 8242 ಗಿರಿರಾಜ ಕೋಳಿಮರಿಗಳನ್ನು ಸಾಕಲು ತಾಂತ್ರಿಕ ಸಲಹೆ ನೀಡಿ ಉತ್ತೇಜಿಸಲಾಗಿದೆ.

ಕೃಷಿ ಮಾರುಕಟ್ಟೆಯಲ್ಲಿ ಬಡ್ತಿ ಹಗರಣ

5 (12) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಮಾರಾಟ ಇಲಾಖೆ ಅಸ್ತಿತ್ವಕ್ಕೆ ಬಂದು 30 ವರ್ಷ ಕಳೆದರೂ ಸಹ ಈವರೆಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸದಿರಲು ಕಾರಣವೇನು?

ಆ) ಇದರಿಂದಾಗಿ ಬಡ್ತಿಗಳಲ್ಲಿ ಅಕ್ರಮವಾಗಿ ಸೇವಾ ಹಿರಿತನವನ್ನು ಕಡೆಗಣಿಸಿ ವಂಚಿಸಿರುವ ಪ್ರಕರಣ ಬೆಳಕಿಗೆ ಬಂದಿದೆಯೇ;

ಇ) ಬಂದಿದ್ದಲ್ಲಿ, 28.03.1994ರ ನಿಯಮ 11 ರಂತೆ ಅಮಾಲ್ಗಮೇಷನ್ ಪ್ರಕಾರ ನೀಡಿದ ಬಡ್ತಿಗಳಲ್ಲಿ ವ್ಯತ್ಯಾಸ ಮಾಡಿ ನೌಕರರಿಗೆ ಅನ್ಯಾಯ ಮಾಡಿರುವ ಬಗ್ಗೆ ಸರ್ಕಾರದ ನಿಲುವೇನು?

ಈ) ನಿಯಮಗಳನ್ನು ಗಾಳಿಗೆ ತೂರಿ ಬೆರಳಚ್ಚುಗಾರರರನ್ನು ನೇರವಾಗಿ ಪ್ರಥಮ ದರ್ಜೆ ಸಹಾಯಕರಾಗಿ ಬಡ್ತಿಗೊಳಿಸಿರುವುದು ನಿಜವೇ;